ಶ್ರೀ ಹೆಚ್. ಡಿ. ದೇವೇಗೌಡ.—ಈ ಬಗ್ಗೆ ಏನಿದ್ದರೂ ಇನ್ನು ೨-೩ ದಿವಸದಲ್ಲೇ ತೀರ್ಮಾನ ಮಾಡಬೇಕು. ಇಲ್ಲದೇ ಹೋದರೆ ಆವರ ಬೆಳೆಯೆಲ್ಲಾ ಹಾಳಾಗಿ ಹೋಗುತ್ತದೆ. ಮಾರ್ಚಿ ಕೊನೆಯೊಳಗೇನಾದರೂ ಕೂಡ ಭರಣಿ ಮಳೆ ಆದರೆ ಬೆಳೆ ಉಳಿದುಕೊಳ್ಳುತ್ತದೆ ಎನ್ನುವುದು ನಮ್ಮ ಆಶಯ. ಈ ಒಂದೂ ದ್ವಂದ್ವ ಹೋರಾಟದಲ್ಲಿ ನಾವು ಇದ್ದೇವೆ. ಈ ಬಗ್ಗೆ ನಾವು ಏನೂ ನಿರ್ಣಯ ಮಾಡಿಲ್ಲ. ಈ ವಿಷಯವನ್ನು ನಾನು ಹಿಂದೆಯೇ ಹೇಳಿದ್ದೇನೆ.

(2) ಧಾರವಾಡ ಜಿಲ್ಲೆಯಲ್ಲಿ ವ್ಯವಸಾಯಗಾರರು ಚಳುವಳಿಯನ್ನು ಪ್ರಾರಂಭಿಸಿ ಜೈಲಿಗೆ ಹೋಗುತ್ತಿರುವುದು.

ಶ್ರೀ ಆರ್. ವೆಂಕಟರಾವಯ್ಯ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಉತ್ತರ ಕರ್ನಾಟಕದ ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲಿ ರೈತರು ಜೇಲ್ ಭರೋ ಚಳುವಳಿ ಆರಂಭಿಸಿರುವ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು) —ರೈತರೆ ತಮ್ಮ ಸಂಕಷ್ಟಗಳನ್ನು ಪರಿಹರಿಸಲು ಸರ್ಕಾರವನ್ನು ಕೇಳುತ್ತಲೇ ಬಂದಿದ್ದಾರೆ. ಈಗ ಭೂ ಕಂದಾಯ ಇತರೆ ಸಾಲಗಳನ್ನು ಸರ್ಕಾರವು ಬಲವಾತ್ಕಾರವಾಗಿ ವಸೂಲು ಮಾಡುತ್ತಿದೆ. ರೈತರ ನ್ಯಾಯಬದ್ಧವಾದ ಬೇಡಿಕೆಗಳನ್ನು ಈಡೇರಿಸುವುದು ಸರ್ಕಾರದ ಧರ್ಮ. ರೈತರಿಗೆ ತಮ್ಮ ಉತ್ಪಾದನೆಯ ಮೇಲೆ ಸರಿಯಾಗಿ ಧಾರಣೆ ಸಿಗದೆ ಕೊರಗುತ್ತಿದ್ದಾರೆ. ಆದಕ್ಕಾಗಿ ನಾನು ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಸರ್ಕಾರ ರೈತರ ನ್ಯಾಯಬದ್ಧವಾದ ಬೇಡಿಕೆಗಳನ್ನು ಯಾವಾಗಲೂ ಸಹಾನುಭೂತಿಯಿಂದ ಪರಿಶೀಲಿಸುತ್ತಾ ಬಂದಿದೆ. ರೈತರ ಹಲವಾರು ಬೇಡಿಕೆಗಳನ್ನು ಸಚಿವ ಸಂಪುಟದ ಉಪ ಸಮಿತಿಯು ಸರ್ಕಾರಕ್ಕೆ ಅನೇಕ ಶಿಫಾರಸ್ಸುಗಳನ್ನು ಮಾಡಿತ್ತು. ಅವುಗಳನ್ನು ಕ್ರೋಢೀಕರಿಸಿ ಸರ್ಕಾರ ರೈತರಿಗೆ ಕೆಳಕಂಡ ಮುಖ್ಯವಾದ ರಿಯಾಯಿತಿಗಳನ್ನು ಕೊಟ್ಟಿದೆ.

೧) ಸುಮಾರು ೫೦೦ ಕೋಟಿ ರೂಪಾಯಿಗಳ ಭೂ ಅಭಿವೃದ್ಧಿ ಶುಲ್ಕವನ್ನು ಮನ್ನಾ ಮಾಡಿದೆ,

೨) ೭೮ರಲ್ಲಿ ವಿಧಿಸಿದ ಹೆಚ್ಚಿನ ನೀರಾವರಿ ತೆರಿಗೆಯನ್ನು ಕಡಿಮೆ ಮಾಡಿದೆ.

೩) ೧೦ ಏಕರೆ ಮತ್ತು ಅದಕ್ಕಿಂತ ಕಡಿಮೆ ಇದ್ದ ಒಣ ಬೇಸಾಯಗಾರರಿಗೆ ಭೂ ಕಂದಾಯವನ್ನು ಮನ್ನಾ ಮಾಡಿದೆ.

೪) ೧೭-೧೦-೧೯೮೪ರಿಂದ ಮುಂದೆ ಕೊಡಬೇಕಾದ ೧೦ ವಿಮಾ ಕಂತುಗಳನ್ನು (ಪ್ರೀಮಿಯಂ ಇನ್ಸ್ಟಾಲ್‌ಮೆಂಟ್ಸ್)ಗಳನ್ನು ಮನ್ನಾ ಮಾಡಿದೆ.

೫) ತಕಾವಿ ಸಾಲ, ಬಂಡಿಂಗ್ ಸಾಲ, ಅಲ್ಪಾವಧಿ ಸಾಲಗಳನ್ನು ಮತ್ತು ಇನ್ನಿತರ ಸಾಲವನ್ನು ಮನ್ನಾ ಮಾಡಿದೆ. ಅಲ್ಲದೆ.

೬) ಸಹಕಾರ ಸಾಲದ ಮೇಲಿನ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದೆ. ಮತ್ತು ರೈತರು ಉಪಯೋಗಿಸುವ ರಾಸಾಯನಿಕ ಗೊಬ್ಬರ, ಟ್ರಾಕ್ಟರ್ ಮತ್ತು ವ್ಯವಸಾಯ ಉಪಕರಣಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿದೆ. ಹೀಗಾಗಿ ಒಟ್ಟು ರೈತರಿಗೆ ಸುಮಾರು ೬೦೦ ಕೋಟಿ ರೂಪಾಯಿಗಳ ರಿಯಾಯಿತಿಗಳನ್ನು ಸರ್ಕಾರವು ನೀಡಿದೆ.

ರೈತಸಂಘದ ಕೆಲವರು ತಿಳಿದಂತೆ, ಭೂ ಅಭಿವೃದ್ಧಿ ತೆರಿಗೆಯನ್ನು ಪುನಃ ವಿಧಿಸುವ ವಿಚಾರ ಸರ್ಕಾರದ ವಿಚಾರದಲ್ಲಿ ಇಲ್ಲ. ೧೯೮೩-೮೪, ೧೯೮೪-೮೫, ೧೯೮೫-೮೬ರಲ್ಲಿ ಭೀಕರ ಬರಗಾಲ ಪರಿಸ್ಥಿತಿ ತೋರಿಸಿದ್ದುದ್ದಕ್ಕಾಗಿ ಎಷ್ಟೋ ಭೂ ಕಂದಾಯವನ್ನು ಮನ್ನಾ ಮಾಡಲಾಗಿದೆ. ಮತ್ತು ವಸೂಲಿ ವಜಾಮಾಡಲಾಗಿದೆ. ಸರ್ಕಾರದ ಕ್ರಮದಿಂದ ಸಹಕಾರ ಸಾಲಗಳ ವಸೂಲಾತಿ ಕೂಡ ವಜಾಮಾಡಲ್ಪಟ್ಟಿತು.

ಈ ಎಲ್ಲಾ ಸಾಲಗಳ ಮುಂದೂಡಿಕೆ ಮತ್ತು ಭೂ ಕಂದಾಯ ಮುಂದೂಡಿಕೆ ಕ್ರಮದಿಂದ ಸರ್ಕಾರಕ್ಕೆ ಬರಬೇಕಾದ ಹಣ ಈ ವರ್ಷದ ಜನವರಿವರೆಗೆ ಸುಮಾರು ೮೫ ಕೋಟಿ ರೂಪಾಯಿಗಳ ಬಾಕಿ

ಇದೆ. ಆದರಲ್ಲಿ ಸುಮಾರು ೫೧ ಕೋಟಿ ರೂಪಾಯಿ ಭೂ ಕಂದಾಯ ನೀರಾವರಿ ತೆರಿಗೆ ಬರಬೇಕಾಗಿದೆ. ಮತ್ತು ೩೨ ಕೋಟಿ ರೂಪಾಯಿ ಸಾಲ ಮತ್ತು ಇತರೆ ಸರ್ಕಾರಿ ಹಣ ಸಂದಾಯ ಆಗಬೇಕಾಗಿದೆ.

ಕಳೆದ ೩-೪ ವರ್ಷಗಳಿಂದ ಈ ಸಲ ಮಳೆ ಬೆಳೆ ಪರಿಸ್ಥಿತಿಯು ಸ್ವಲ್ಪ ಸಂಧಾರಿಸಿದೆ. ಸರ್ಕಾರಿ ಬಾಕಿಯನ್ನು ಸಾಧ್ಯವಾದಷ್ಟು ವಸೂಲು ಮಾಡಲಂ ಸರ್ಕಾರ ನಿರ್ಧರಿಸಿದೆ. ರಾಜ್ಯದ ಆರ್ಥಿಕ ಯೋಜನೆಯಂನ್ವಯ ಸರ್ಕಾರಿ ಬಾಕಿಯಲ್ಲಿ ಮತ್ತು ಚಾಲ್ತಿ ಬರಬೇಕಾದ ಹಣದಲ್ಲಿ ಶೇಕಡ ೫೦ರಷ್ಟನ್ನು ವಸೂಲು ಮಾಡಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ. ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ತೊಂದರೆ ಕೊಡಬಾರದು ಎಂದು ಸರ್ಕಾರದ ಉದ್ದೇಶವನ್ನು ಸ್ಪಷ್ಟಪಡಿಸಲಾಗಿದೆ. ಇಂತಹ ರೈತರಿಗೆ ಭೂ ಕಂದಾಯವನ್ನು ಸರ್ಕಾರವೇ ಮನ್ನಾ ಮಾಡಿದೆ. ಸರ್ಕಾರಿ ಬಾಕಿಯನ್ನು ಕೊಡಲು ಶಕ್ತರಾದಂತ ಶ್ರೀಮಂತ ರೈತರಿಂದ ವಸೂಲು ಮಾಡಲು ಆದೇಶ ನೀಡಿದೆ. ನೀರಾವರಿ ಸೌಲಭ್ಯವನ್ನು ಪಡೆದ ಶ್ರೀಮಂತ ರೈತರಿಂದ ವಸೂಲಾತಿಗಾಗಿ ಹೆಚ್ಚಿನ ಆಸಕ್ತಿ ವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಈ ದಿಶೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೂಡ ರೈತರಿಗೆ ಮನವಿ ಮಾಡಿಕೊಂಡಿದ್ದಾರೆ. ಸರ್ಕಾರಕ್ಕೆ ಸಲ್ಲಬೇಕಾದ ತೆರಿಗೆ ಕೊಡುವುದು ಪ್ರತಿಯೊಬ್ಬ ನಾಗರೀಕನ ಹಕ್ಕು ಹಾಗೂ ಕರ್ತವ್ಯ ಆಗಿದೆ.

ಮಾನ್ಯ ಸಭಾಧ್ಯಕ್ಷರೇ, ಇದರ ಜೊತೆಗೆ ನಾನು ಇನ್ನೂ ಕೆಲವು ಅಂಕಿಅಂಶಗಳನ್ನು ಈ ಸದನದ ಮುಂದೆ ಇಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ಧಾರವಾಡ ಜಿಲ್ಲಾ ಬ್ಯಾಂಕ್ ಹೋದ ವರ್ಷ ವಸೂಲ್ಮಾಡಬೇಕಾದ್ದು ೩೧.೯೫ ಕೋಟಿರೂಪಾಯಿ ಇದರಲ್ಲಿ ಒಂದು ಕೋಟಿ ಹದಿನೇಳು ಲಕ್ಷ ವಸೂಲಾಗಿದೆ. ಒಟ್ಟು ಸುಮಾರು ೩೨ ಕೋಟಿ ರೂಪಾಯಿಗಳಲ್ಲಿ ೧ ಕೋಟಿ ೧೭ ಲಕ್ಷ ರೂಪಾಯಿಗಳನ್ನು ವಸೂಲ್ಮಾಡಿದ್ದಾರೆ. ಇದು ಶೇಕಡಾ ೩.೬೬ ಆಗಂತ್ತದೆ. ಈ ರೀತಿ ಆದರೆ ಯಾವ ಬ್ಯಾಂಕ್ ತಾನೇ ಉಳಿಯಂತ್ತದೆ? ಈ ಬ್ಯಾಂಕ್‌ನಲ್ಲಿ ಡೆಫಾಜಿಟ್ ಜಾಸ್ತಿ ಇದೆ. ಇಲ್ಲಿ ೩೧-೧೨-೮೬ರವರೆಗೆ ೧೫.೫೦ ಕೋಟಿ ರೂಪಾಯಿಗಳು ವಸೂಲಿ ಆಗಿದ್ದರೆ ೩೧-೧೨-೮೭ರವರೆಗೆ ೨೨.೫೦ ಕೋಟಿ ರೂಪಾಯಿಗಳು ವಸೂಲಿ ಆಗಿದೆ. ಅಂದರೆ ಒಂದು ಪರ್ಸೆಂಟ್ ಹೆಚ್ಚು ವಸೂಲಿ ಆಗಿದೆ. ಆದೇ ಬೆಳಗಾಂ ಜಿಲ್ಲಾ ಬ್ಯಾಂಕ್‌ನಲ್ಲಿ ಈ ಸಲ ಅಡ್ವಾನ್ಸ್ ಮಾಡಿದ್ದು ೧೮.೮೬ ಕೋಟಿ ರೂಪಾಯಿಗಳು. ಒಟ್ಟು ೨೮.೬೧ ಕೋಟಿ ರೂಪಾಯಿಂಗಳು ವಸೂಲಿ ಆಗಬೇಕಾಗಿತ್ತು. ಆದರೆ ವಸೂಲಿ ಆಗಿದ್ದು ೧೨.೭೪ ಕೋಟಿ ರೂಪಾಯಿಂಗಳು. ಅಂದರೆ ೪೭.೫೨ ಪರ್ಸೆಂಟ್‌ನಷ್ಟು ವಸೂಲಿ ಆಗಿದೆ. ಇದರ ಹಿಂದಿನ ವರ್ಷ ಸಹ ೧೪.೮ ಕೋಟಿ ರೂಪಾಯಿಗಳು ವಸೂಲಿ ಆಗಿತ್ತು. ಇದರ ಜೊತೆಗೆ ಬಳ್ಳಾರಿ ಜಿಲ್ಲಾ ಬ್ಯಾಂಕ್‌ನಲ್ಲಿ ೩೧-೧೨-೮೬ರವರೆಗೆ ೯ ಪರ್ಸೆಂಟ್‌ನಷ್ಟು ಹಣ ವಸೂಲಿ ಆಗಿದ್ದರೆ ೩೧-೧೨-೮೭ರವರೆಗೆ ೬.೩೪ ಪರ್ಸೆಂಟ್‌ನಷ್ಟು ವಸೂಲಿ ಆಗಿದೆ. ಈ ಕಾರಣದಿಂದ ೫ ಜಿಲ್ಲಾ ಬ್ಯಾಂಕ್‌ಗಳು ಅಂದರೆ ಹಾಸನ, ಗುಲ್ಬರ್ಗ, ಶಿವಮೊಗ್ಗ, ಮೈಸೂರು ಹಾಗೂ ಬಿಜಾಪುರ ಜಿಲ್ಲಾ ಬ್ಯಾಂಕ್‌ಗಳು ನಬಾರ್ಡ್‌ನಿಂದ ಸಹಾಯ ಪಡೆದುಕೊಳ್ಳುವಂತಹ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಮತ್ತೆ ೧೭೭ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗಳ ಪೈಕಿ ಕೇವಲ ೩೩ ಬ್ಯಾಂಕ್‌ಗಳು ಮಾತ್ರ ನಬಾರ್ಡ್‌ನಿಂದ ಫುಲ್ ಫೈನಾನ್ಸ್ ಪಡೆದುಕೊಳ್ಳುವ ಸ್ಥಿತಿಯಲ್ಲಿದ್ದರೆ ಮತ್ತೆ ಕೆಲವು ಪಾರ್ಷಿಯಲ್ ಆಗಿ ಫೈನಾನ್ಸ್‌ನ್ನು ಪಡೆದುಕೊಳ್ಳುವ ಸ್ಥಿತಿಯಲ್ಲಿವೆ. ರೈತರಿಂದ ಇವು ಬಾಕಿ ವಸೂಲಿ ಮಾಡದಿದ್ದರೆ ಯಾವ ರೀತಿ ನಡೆಯಬೇಕು? ಹಳೆಯ ಸಾಲ ಕೊಡದಿದ್ದರೆ ಮತ್ತೆ ಹೊಸ ಸಾಲ ಕೊಡುವುದು ಹೇಗೆ ಎಂಬುದನ್ನು ಎಲ್ಲರೂ ಯೋಚನೆ ಮಾಡಬೇಕು. ಸುಮಾರು ೬೨ ಕೋಟಿ ರೂಪಾಯಿಗಳಷ್ಟು ಬಡ್ಡಿಯನ್ನು ಮನ್ನಾ ಮಾಡಿದ್ದೇವೆ. ಬಾವಿಗಳ ಸಾಲದ ಪೈಕಿ ಕೆಲವು ಬಾವಿಗಳಲ್ಲಿ ನೀರು ಬರದ ಕಾರಣ ೧೩.೭೫ ಕೋಟಿ ರೂಪಾಯಿಗಳನ್ನು ವಜಾ ಮಾಡಿದ್ದೇವೆ. ನೀರು ಬಾರದ ಬಾವಿಗಳಿಗೆ ಸಂಬಂಧಪಟ್ಟಂತೆ ಅಸಲು ಮತ್ತು ಬಡ್ಡಿ ಎರಡನ್ನೂ ವಜಾ ಮಾಡಿದ್ದೇವೆ. ರೈತರಿಗೆ ಕೊಡುವ ಸಾಲಕ್ಕೆ ನಾವು ಕೇವಲ ೭ ಪರ್ಸೆಂಟ್ ಬಡ್ಡಿ ವಿಧಿಸುತ್ತೇವೆ. ಇಂತಹ ಸಾಲವನ್ನು ವಾಪಸ್ ಮಾಡದಿದ್ದರೆ ಈ ಸಹಕಾರ ಸಂಘಗಳನ್ನು ಯಾವ ರೀತಿ ನಡೆಸಬೇಕಂ ? ಸಾಲ ಸರಿಯಾಗಿ ವಸೂಲಿ ಆಗದಿದ್ದರೆ ಸಣ್ಣ ರೈತರಿಗೆ ಮತ್ತೆ ಸಾಲ ಸಿಗುವುದಿಲ್ಲ. ಈ ಬಾಕಿ ಸಾಲವನ್ನು ಕಡ್ಡಾಯವಾಗಿ ವಸೂಲಿ ಮಾಡದಿದ್ದರೆ ಯಾರಿಗೂ ಸಹ ನಾವು ಸಹಾಯ ಮಾಡುವುದಕ್ಕಾಗುವುದಿಲ್ಲ ಈ ಕಾರಣದಿಂದಲೇ ಕಡ್ಡಾಯವಾಗಿ ಸಾಲ ವಸೂಲಿ ಮಾಡುವಂತಹ ಕ್ರಮವನ್ನು ನಾವು ತೆಗೆದು ಕೊಂಡಿದ್ದೇವೆ. ಈ ಬ್ಯಾಂಕ್‌ಗಳ ಹಿತದೃಷ್ಟಿಯಿಂದ ಮತ್ತು ರೈತರ ಸಮಗ್ರಹಿತದೃಷ್ಟಿಯಿಂದ ನಾವು ಈ ಕೆಲಸ ಮಾಡಿದ್ದೇವೆ. ನಾವು ಎಷ್ಟೇ ಒಳ್ಳೆಯ ಕೆಲಸಗಳನ್ನು ಮಾಡಿದರೂ ಸಹ ರೈತ ಸಂಘದವರು

ನಮಗೆ ಪುರಸ್ಕಾರ ಕೊಡುವುದಿಲ್ಲ. ಅವರು ಅವರದೇ ಆದಂಥ ಯೋಚನೆಯನ್ನು ಇಟ್ಟುಕೊಂಡಂತೆ ಕಾಣುತ್ತದೆ. ರೆಗ್ಯುಲೇಟೆಡ್ ಮಾರ್ಕೆಟ್‌ಯಾರ್ಡಿನಲ್ಲಿ ರೈತರ ಕಡೆಯಿಂದ ಕಮೀಷನ್ ತೆಗೆದುಕೊಳ್ಳಬಾರದು, ಕೊಳ್ಳುವವರಿಂದ ತೆಗೆದುಕೊಳ್ಳಬೇಕು ಎಂದು ನಾವು ಹೇಳಿದಾಗ ರೈತ ಸಂಘದವರು ಇದನ್ನು ಸ್ವಾಗತ ಮಾಡಲಿಲ್ಲ ರೈತರ ಸಲುವಾಗಿ ನಾವು ಒಳ್ಳೆಯ ಕಾನೂನುಗಳನ್ನು ಮಾಡಿದರೂ ಸಹ ಅವರಿಗೆ ಹಿಡಿಸುವುದಿಲ್ಲ. ಅವರಿಗೆ ಅವರದೇ ಆದಂಥ ಯೋಚನೆ ಇದ್ದಂತೆ ಕಾಣುತ್ತದೆ. ಈಗಲಾದರೂ ರೈಲ್-ಬರೋ ಕಾರ್ಯಕ್ರಮವನ್ನು ಅವರು ನಿಲ್ಲಿಸಬೇಕೆಂದು ಈ ಸಭೆಯ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ. ಸಾಲ ವಾಪಸ್ ಮಾಡಿದರೆ ನಮಗೆ ಹೆಚ್ಚು ಹೆಚ್ಚು ರೈತರಿಗೆ ಸಹಾಯ ಮಾಡಲು ಅನುಕೂಲವಾಗುತ್ತದೆ. ಈ ಸಲದ ಬಜೆಟಿನ ಮೇಲೆ ಮಾತನಾಡಿದ ಸದಸ್ಯರು ಲೋಕೋಪಯೋಗಿ ಇಲಾಖೆಯಲ್ಲಿ ನಡೆದ ಕಾಮಗಾರಿ ಕೆಲಸಗಳಿಗೆ ಇನ್ನೂ ಪೇಮೆಂಟ್ ಮಾಡಿಲ್ಲ ಎಂದು ಹೇಳಿದರು. ಆದರೆ ಸಾಲದ ವಸೂಲಿ ಬಗ್ಗೆ ಹೇಳಲಿಲ್ಲ. ದಯವಿಟ್ಟು ಈಗಲಾದರೂ ತಾವು ಇದಕ್ಕೆ ಸಹಕಾರ ನೀಡಬೇಕು ಮತ್ತು ರೈತ ಸಂಘದವರು ಸಾಲ ವಸೂಲಿ ಕಾರ್ಯಕ್ರಮಕ್ಕೆ ಬೆಂಬಲ ನೀಡಬೇಕೆಂದು ಈ ಸದನದ ಮೂಲಕ ಪುತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾವಪ್ಪಯ್ಯ.—ಮಾನ್ಯ ಸಚಿವರು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತೊಂದರೆ ಕೊಡುವುದಿಲ್ಲ ಮತ್ತು ಅವರಿಂದ ಬಲತ್ಕಾರದಿಂದ ಸಾಲ ವಸೂಲಿ ಮಾಡುವುದಿಲ್ಲವೆಂದು ಈಗತಾನೆ ಸ್ಪಷ್ಟಪಡಿಸಿದರು. ಆದರೆ ಈಗ ಮಾನ್ಯ ಸಚಿವರು ಹೇಳಿದಂತೆ ನಡೆಯುತ್ತಿಲ್ಲ. ಪ್ರತಿಯೊಬ್ಬ ಬಡ ರೈತನ ಮನೆಗೆ ಅಧಿಕಾರಿಗಳು ಸಾಲ ವಸೂಲಿಗಾಗಿ ಧಾಳಿ ಮಾಡುತ್ತಿದ್ದಾರೆ ಗ್ರಾಮ ಲೆಕ್ಕಾಧಿಕಾರಿ, ಸಹಕಾರಿಸಂಘದ ಕಾರ್ಯದರ್ಶಿ, ರಾಷ್ಟ್ರೀಯ ಬ್ಯಾಂಕ್‌ನ ಅಧಿಕಾರಿ ಹೀಗೆ ಮೂರು ನಾಲ್ಕು ಜನ ಅಧಿಕಾರಿಗಳು ಧಾಳಿ ಮಾಡುತ್ತಿದ್ದಾರೆ. ಇವರು ಯಾವ ಬಡವರನ್ನು ಸಹ ಬಿಟ್ಟಿಲ್ಲ. ಮಾನ್ಯ ರತ್ನಾಕರ್ ಅವರು ಹೇಳಿದಂತೆ ೩೦೦ ರೂಪಾಯಿಗಳ ಸಾಲದ ಬಾಕಿಗೆ ಒಬ್ಬ ಬಡ ರೈತನ ೩ ಗುಂಟೆ ಜಮೀನನ್ನು ಹರಾಜಿಗೆ ತಂದಿದ್ದಾರೆ. ಇದು ಅನ್ಯಾಯವಲ್ಲವೇ ?

ಅಧ್ಯಕ್ಷರು —ರೈತರ ಮನೆಯಲ್ಲಿದ್ದ ಜೋಳವನ್ನು ಸಹ ಜಪ್ತಿ ಮಾಡಿದ್ದಾರೆಂದು ಹೇಳಿದ್ದಾರೆ.

ಶ್ರೀ ಆರ್ ವೆಂಕಟರಾವಪ್ಪಯ್ಯ.—ಮನೆಯಲ್ಲಿರುವ ಯಾವ ಸಾಮಾನುಗಳನ್ನು ಸಹ ಬಿಡುತ್ತಿಲ್ಲ. ಈ ಸಲ ರೈತರ ಬೆಳೆ ಸಹ ಕೈಗೆ ಬರದೆ ನಷ್ಟವಾಗಿದೆ. ಹೋನವರ್ಷ ೧೯ ಜಿಲ್ಲೆಗಳಲ್ಲಿ ಬರಗಾಲ ಪರಿಸ್ಥಿತಿ ಇತ್ತು, ಇದರಿಂದ ರೈತರಿಗೆ ತೊಂದರೆ ಉಂಟಾಗಿದೆ ಎಂದು ತಾವು ಒಪ್ಪಿಕೊಂಡಿದ್ದೀರಿ. ಈಗ ಏನಾಗಿದೆಯೆಂದರೆ, ಈ ಬರಗಾಲ ಪರಿಸ್ಥಿತಿಯಿಂದ ಇನ್ನೂ ನಾವು ಸುಧಾರಿಸಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಇದರ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು. ಈಗ ರೈತರು ಬೆಳೆದಿರುವ ಪ್ರತಿಯೊಂದು ಬೆಳೆಗೆ ರೇಟ್ ಕಡಿಮೆಯಾಗಿದೆ. ಆಲೂಗಡ್ಡೆ ಒಂದೇ ಅಲ್ಲ. ಎಲ್ಲಾ ಬೆಳೆಗಳ ರೇಟ್ ಕಡಿಮೆಯಾಗಿದೆ. ಟೊಮ್ಯಾಟೊ ಕೆ.ಜಿ.ಗೆ ೫೦ ಪೈಸೆಯಾಗಿದೆ. ಕ್ಯಾಬೇಜನ್ನು ಕೇಳುವವರಿಲ್ಲ, ಕ್ಯಾರೇಟನ್ನೂ ಕೇಳುವವರಿಲ್ಲ. ಅವೆಲ್ಲವನ್ನೂ ಮಾರ್ಕೆಟಿಗೆ ಸಾಗಿಸುವ ರೇಟೂ ಕೂಡ ಸಿಗುತ್ತಿಲ್ಲ. ರಾಗಿ, ಜೋಳ, ಬೆಲ್ಲ, ಹತ್ತಿ ಹೀಗೆ ಎಲ್ಲದರ ಬೆಲೆಗಳೂ ಕಡಿಮೆಯಾಗಿದೆ. ಆದುದರಿಂದ ದಯವಿಟ್ಟು ಬಲಾತ್ಕಾರವಾಗಿ ವಸೂಲು ಮಾಡುವುದನ್ನು ಬಿಡಬೇಕು. ಇನ್ನೊಂದು ವಿಷಯವೇನೆಂದರೆ, ಮನೆಗಳಿಗೆ ಗೂಳಿಗಳು ನುಗ್ಗುವ ಹಾಗೆ ನುಗ್ಗಿ ಏನಿದ್ದರೆ, ಏನು ಸಿಕ್ಕಿದರೆ ಅದನ್ನು ಎತ್ತಿಕೊಂಡು ಬರುತ್ತಿದ್ದಾರೆ, ರೈತರಿಗೆ ಬಹಳ ಅನ್ಯಾಯ ಮಾಡುತ್ತಿದ್ದಾರೆ, ಅವರಿಗೆ ಕಂಟ್ರೋಲ್ ಎಂಬುದೇ ಇಲ್ಲ. ಆದ್ದರಿಂದ ಇದನ್ನು ಮೊದಲು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ ೨೮ನೇ ಫೆಬ್ರುವರಿಯಿಂದ ರಾಜ್ಯ ರೈತ ಸಂಘದವರು ಧಾರವಾಡ ಮತ್ತು ಬೆಳಗಾಂನಲ್ಲಿ ಜೈಲ್‌ಬರೋ ಸತ್ಯಾಗ್ರಹವನ್ನು ಶುರು ಮಾಡಿದರು. ಸನ್ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಸನ್ಮಾನ್ಯ ಸಹಕಾರ ಸಚಿವರು ರೈತರಿಗೆ ಕೊಟ್ಟಿರುವಂಥ ಅನೇಕ ರಿಯಾಯಿತಿಗಳ ಬಂದು ಪಟ್ಟಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಮೇಲಿಂದ ಮೇಲೆ ಒಂದು ಮಾತನ್ನು ಈ ಸದನದಲ್ಲಿ ಹೇಳುತ್ತಿದ್ದೇನೆ. ಏನೆಂದರೆ, ನೀವು ಎಲ್ಲದಕ್ಕೂ ಅಧಿಕಾರಿಗಳು ಹೇಳಿಂವುದನ್ನು ಕೇಳಬಾರದು ಎಂದು, ಕಳೆದ ಮೂರು, ನಾಲ್ಕು ವರ್ಷಗಳಿಗಿಂತ ಈಗ ಮಳೆಬೆಳೆ ಸ್ವಲ್ಪ ಸುಧಾರಿಸಿದೆ ಎಂದು ಮಾನ್ಯ ಸಚಿವರು ಈಗ ತಮ್ಮ ಉತ್ತರದಲ್ಲಿ ಹೇಳಿದರು. ರೈತ ಸಂಘದ ಬೇಡಿಕೆ ಇಷ್ಟೇ ಇದೆ. ಸರ್ಕಾರ ರೈತ ವಿರೋಧಿ ನೀತಿಯನ್ನು ಅನುಸರಿಸಿದೆ ಎಂಬ ಒಂದು ಆಪಾದನೆ ಇದೆ. ಮತ್ತೆ ಆಪಾದನೆ ರೈತ ಉತ್ಪಾದಿಸಿದ ಕೃಷಿ ಬೆಳೆಗಳಿಗೆ ಯೋಗ್ಯ ಬೆಲೆ ಕೊಟ್ಟಿಲ್ಲ ಎನ್ನುವುದು ಎರಡನೇ

ಆಪಾದನೆ. ಮೂರನೆಯ ಆಪಾದನೆಯೆಂದರೆ ಶ್ರೀಮಂತ ರೈತ ಮತ್ತು ಬಡವ ರೈತ ಎನ್ನುವಂಥ ಭೇದಭಾವ ಮಾಡಲಾರದೆ ಅಧಿಕಾರಿಗಳು ಮನೆ ಹೊಕ್ಕು ಅವರ ಜೀವನಾವಶ್ಯಕ ವಸ್ತುಗಳನ್ನು ತೆಗೆದು ಕೊಂಡು ಹೋಗುತ್ತಾ ಇದ್ದಾರೆ. ಸರ್ಕಾರ ರೈತರಿಗೆ ಈ ನೀತಿಯಂನ್ನು ಅನುಸರಿಸಿದರೆ ಮಾರು ಜಪ್ತಿ ಕ್ರಮ ಮಾಡುತ್ತೇವೆ ಎಂದು ಹೇಳಿದ್ದಾರೆ. ನಾನು ಇಷ್ಟೇ ಪ್ರಾರ್ಥಿಸಿಕೊಳ್ಳುತ್ತೇನೆ. ಕರ್ನಾಟಕ ರಾಜ್ಯ ರೈತ ಸಂಘದವರು ಚಳುವಳಿ ಪ್ರಾರಂಭ ಮಾಡಿದ್ದಾರೆ. ಅದು ಇನ್ನುಮುಂದೆ ವಿಕೋಪಕ್ಕೆ ಹೋಗಬಾರದು. ಈಗ ೩-೪ ಸಾವಿರ ಜನ ಮಾತ್ರ ಜೈಲಿಗೆ ಹೋಗಿದ್ದಾರೆ. ಕಳೆದ ವರ್ಷ ಏನಾಯಿತು ಎನ್ನುವುದು ತಮಗೆ ಗೊತ್ತಿದೆ. ಸುಮಾರು ೪೮ ಸಾವಿರ ಜನ ಜೈಲ್‌ಭರೋ ಮಾಡಿದರು. ಕರ್ನಾಟಕ ದಲ್ಲಿ ರಂದ್ರಪ್ಪನವರ ನೇತೃತ್ವದ ಒಂದು ರೈತ ಸಂಘ ಇದೆ, ಮತ್ತು ಶಂಕ್ರಿಕೊಪ್ಪನವರ ನೇತೃತ್ವದ ಒಂದು ರೈತ ಸಂಘ ಇದೆ. ಆದ್ದರಿಂದ ಎಲ್ಲಾ ರೈತಸಂಘದವರನ್ನು ತಾವು ಆದಷ್ಟುಬೇಗ ಕರೆಸಿ, ಒಂದಂ ದಂಡು ಮೇಜಿನ ಸಭೆಯನ್ನು ಸೇರಿಸಿ ಅವರ ಸಮಸ್ಯೆಗಳನ್ನು ಗಂಭೀರವಾಗಿ ವಿಚಾರ ಮಾಡಿ, ಸಮಸ್ಯೆಗಳನ್ನು ನಿವಾರಿಸುವ ಸಲುವಾಗಿ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಸನ್ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

†ಶ್ರೀ ಬಿ. ಶಿವರಾಮ ರೆಡ್ಡಿ.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಮಾನ್ಯ ಸಹಕಾರ ಸಚಿವರು ಕೊಟ್ಟಿರತಕ್ಕ ಪಟ್ಟಿಯನ್ನು ನೋಡಿದರೆ ನನ್ನ ಅನುಭವದಲ್ಲಿದ್ದಂತೆ ಮೊದಲನೆಯದಾಗಿ ಸುಮಾರು ೫೦೦ ಕೋಟಿ ರೂಪಾಯಿಗಳ ಭೂ ಅಭಿವೃದ್ಧಿ ಶುಲ್ಕವನ್ನು ಮನ್ನಾ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ಯಾವ ರೀತಿ ಮಾಡಿದ್ದಾರೆ ಎಂದು ನಮ್ಮ ರೈತರಿಗೆ ಗೊತ್ತಿಲ್ಲ. ನಾನು ಈ ಬೆಟರ್‌ಮೆಂಟ್ ಲೆವಿ ಬಗ್ಗೆ ಹೇಳುತ್ತಾ ಇದ್ದೇನೆ. ನಾವು ನೀರಾವರಿ ಪ್ರದೇಶ ದಲ್ಲಿರತಕ್ಕ ರೈತರಾಗಿದ್ದೇವೆ. ಈಗ ಅಧಿಕಾರಿಗಳು ಏನು ಮಾಡಿದ್ದಾರೆಂದರೆ, ನಮಗೆ ಬರತಕ್ಕಂಥಾದ್ದು ೫೦ ರೂಪಾಯಿ ಲಾಭ ಇದ್ದರೆ ೫೦೦ ರೂಪಾಯಿಯಂತೆ ಬೆಟರ್‌ಮೆಂಟ್ ಲೆವಿ ಫಿಕ್ಸ್ ಮಾಡಿದ್ದಾರೆ. ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದ ಹಾಗೆ,ಏನೇ ಇರಲಿ.ರೈತರು ಕೊಡುವುದು ಧರ್ಮ ಇದೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಇವತ್ತು ಅಕ್ಕಿ ಇರಬಹುದು, ನೆಲ್ಲು ಇರಬಹುದು ಜೋಳ ಇರಬಹುದು, ನಾವು ಬೆಳೆದ ಮಾಲನ್ನು ಬಜಾರಿನಲ್ಲಿ ಕೊಟ್ಟಮೇಲೆ ೩-೪ ತಿಂಗಳಾದರೂ ದುಡ್ಡು ವಾಪಸ್ ಬಂದಿಲ್ಲ. ಹೋದಸಲ ಬಳ್ಳಾರಿ ತಾಲ್ಲೂಕಿನಲ್ಲಿ, ರಾಯಚೂರು ಜಿಲ್ಲೆಯಲ್ಲಿ ಕೊಟ್ಟಿರತಕ್ಕ ಹತ್ತಿ ಮಾಲಿನ ಹಣ ಇವತ್ತಿನವರೆಗೆ ಲಕ್ಷಗಟ್ಟಲೆ ವಾಪಸ್ ಬಂದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಇದರ ಬಗ್ಗೆ ವಿಶಾದರೂ ಕ್ರಮ ತೆಗೆದುಕೊಳ್ಳಬೇಕಾಗಿತ್ತದೆ. ಮತ್ತೆ ಈಗ ಹಾಲಿ ಬಳ್ಳಾರಿ ಭಾಗದಲ್ಲಿ ಜೋಳದ್ದು ಸರ್ಕಾರ ದಿಂದ ದುಡ್ಡು ಬರತಕ್ಕಂಥ ರೀತಿಯಲ್ಲಿದೆ. ಅದನ್ನು ಬೇಗ ಬರುವ ಹಾಗೆ ಮಾಡಿದರೆ, ಆದಷ್ಟು ಬೇಗ ಬಾಕಿ ಕೊಡುವುದಕ್ಕೆ ತಯಾರಿದ್ದೇವೆ. ಮಾನ್ಯ ರೇವಣ್ಣಸಿದ್ದಯ್ಯನವರು ಸಿರಗುಪ್ಪ ತಾಲ್ಲೂಕಿನ ಬಗ್ಗೆ ಹೇಳಿದರು. ಸಣ್ಣ ರೈತರ ಬಗ್ಗೆ ಸರ್ಕಾರ ಅನುಕಂಪ ತೋರಿಸುತ್ತದೆ ಎಂದು ಮಾನ್ಯ ಸಚಿವರು ಹೇಳಿದರು. ಆದರೆ ಸಿರಗುಪ್ಪ ತಾಲ್ಲೂಕಿನಲ್ಲಿ ಒಂದು ಕಡೆ ಜಪ್ತಿಮಾಡಿ ರಸೀದಿ ಕೊಟ್ಟಿದ್ದಾರೆ. ಆ ರಸೀದಿ ಮಾನ್ಯ ರೇವಣ್ಣಸಿದ್ದಯ್ಯನವರ ಹತ್ತಿರ ಇದೆ.

೩-೩೦ ಪಿ. ಎಂ.

ಸಣ್ಣ ರೈತರುಗಳ ಮನೆಗಳನ್ನು ಜಪ್ತಿ ಮಾಡಿದ್ದಾರೆ. ಆದರೆ ಇಲ್ಲಿ ನೀವು ಆ ರೀತಿ ಮಾಡಿಲ್ಲ ಎಂದು ಹೇಳುತ್ತೀರಿ.ಇದು ಸರಿಯಲ್ಲ. ಕ್ರಮ ತೆಗೆದುಕೊಂಡ ಇಂಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತಗೆದುಕೊಳ್ಳಬೇಕು. ಇವತ್ತು ರೈತ ಸಂಘದವರನ್ನು ಕರೆಸಿ ಮಾತನಾಡಿ ರೈತರಿಗೆ ಸೂಕ್ತ ಪರಿಹಾರ ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವೆಂಕಟರಾಮಯ್ಯ ನವರು, ಕಂದಾಯ ಇಲಾಖೆ ಅಧಿಕಾರಿಗಳು ಸಹಕಾರ ಇಲಾಖೆ ಅಧಿಕಾರಿಗಳು ಹಾಗೂ ರಾಷ್ಟ್ರೀಯ ಬ್ಯಾಂಕ್‌ನ ಅಧಿಕಾರಿಗಳು ಅಂದರೆ ಒಟ್ಟಿಗೆ ೩-೪ ಜನ ಹೋಗಿ ಜಪ್ತಿ ಮಾಡುತ್ತಾರೆಂದು ಹೇಳಿದರು. ಅಂದರೆ ರೈತರು ೩-೪ ಕಡೆ ಸಾಲ ಮಾಡಿದ್ದಾರೆಂದಾಯಿತು ?

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಈಗ ಬರಗಾಲ ಇದೆ.

ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ, ನಾನು ಹುಟ್ಟಿದಾಗಿನಿಂದಲೂ ಕೋಲಾರ ಜಿಲ್ಲೆಯಲ್ಲಿ ೬೦ ಪರ್ಸೆಂಟ್ ವಸೂಲಾಗಿಲ್ಲ. ಹೀಗಾದರೆ ಬ್ಯಾಂಕ್‌ನ್ನು ಹೇಗೆ ನಡೆಸಬೇಕು ಈ ಸದನ ಬಾಕಿ ವಸೂಲು ಮಾಡುವುದು ಬೇಡವೆಂದು ಬೇಕಾದರೆ ತೀರ್ಮಾನ ಮಾಡಲಿ. ಹಣ ವಸೂಲಿ ಮಾಡದಿದ್ದರೆ ಸಾಲ ಎಲ್ಲಿಂದ ತರಬೇಕು ? ನಿರ್ವಾಹಕರು ಹಣ ವಸೂಲು ಮಾಡದಿದ್ದರೆ ಮತ್ತೆ ಸಾಲ ಕೊಡುವುದಿಲ್ಲ. ಈಗಾಗಲೇ ೨೦೦ ಕೋಟಿ ರೂಪಾಯಿ ಡಿಪಾಸಿಟ್ ಹಣ ಕೂಡ ಪಡೆಯಲಾಗಿದೆ. ನಾವು ಎಲ್ಲಾ ಕಡೆ ಸಾಲ ಮಾಡಿಯೂ ಸಹ ರೈತರು ಉದ್ಧಾರವಾಗಿಲ್ಲ. ಮತ್ತೆ ಇವರು ಉದ್ಧಾರವಾಗುವುದು ಯಾವಾಗ ? ಮಾನ್ಯ ಸದಸ್ಯರಾದ ತುಂಗಳ್‌ರವರು ಇದು ರೈತ ವಿರೋಧಿ ಸರ್ಕಾರವೆಂದು ಹೇಳಿದರು.

ಶ್ರೀ ಬಾಬುರೆಡ್ಡಿ ವಿ.ತುಂಗಳ್.—ನಾವಲ್ಲ, ರೈತರು ಹೇಳುತ್ತಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ರೈತ ಸಂಘದವರು ಹೇಳುತ್ತಿದ್ದಾರೆ, ನೀವಲ್ಲ ಕಳೆದ ನಾಲ್ಕು ವರ್ಷಗಳಲ್ಲಿ ಯಾವರೀತಿ ರೈತರೊಂದಿಗೆ ನಡೆದುಕೊಂಡು ಬಂದಿದ್ದೇವೆ. ಎಷ್ಟು ರಿಯಾಯಿತಿ ಕೊಟ್ಟಿದ್ದೇವೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಆದರೂ ಅವರು ಹೇಳಿದ್ದನ್ನು ನೀವು ಕೇಳುವುದಾದರೆ ಅದು ನಮ್ಮ ಗ್ರಹಚಾರ, ದುರಾದೃಷ್ಟ ಎಂದು ಹೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗತಾನೆ ಮಾನ್ಯ ಮಂಖ್ಯಮಂತ್ರಿಗಳು ಅನೌನ್ಸ್ ಮಾಡಿದ್ದಾರೆ. ಬರಗಾಲ ಇರತಕ್ಕ ಪ್ರದೇಶಗಳಲ್ಲಿ.....

ಶ್ರೀ ಆರ್. ಎಲ್. ಜಾಲಪ್ಪ.— ಬರಗಾಲ ಇರುವ ಕಡೆ ಕನ್‌ವರ್ಷನ್ ಕೊಡುತ್ತಿದ್ದೇವೆ ಜಿಲ್ಲಾಧಿಕಾರಿಯವರು ಆರಾಣಿ ಬೆಳೆ ಎಲ್ಲಿ ಆಗಿಲ್ಲ ಅಂಥ ಕಡೆ ಸರ್ಟಿಫಿಕೇಟ್ ಕೊಟ್ಟರೆ ಕನ್‌ವರ್ಷನ್ ಕೊಡುತ್ತಿದ್ದೇವೆ. ಹೋದವರ್ಷ ನಿಯಮ ೧೦೧ಕ್ಕೆ ತಿದ್ದುಪಡಿ ತಂದು ಯಾವ ರೈತರ ಮನೆಗಳನ್ನು ಜಪ್ತಿ ಮಾಡಲಿಲ್ಲ. ದೊಡ್ಡ ರೈತರು ಮತ್ತು ಸಣ್ಣ ರೈತರ ಸ್ಥಿತಿ ಒಂದೇ ಆಗಿತ್ತು. ಈ ವರ್ಷವೂ ಹಾಗೆ ಮಾಡಿದರೆ ನನಗೇನು ಕೆಲಸ ಇರುವುದಿಲ್ಲ. ಸರ್ಕಾರದವರು ರೈತರಿಗಾಗಿ ತಮ್ಮ ಶಕ್ತಿ ಮೀರಿ ಸಹಾಯ ಮಾಡಿದ್ದಾರೆ ರೈತರಿಗೆ ಹಿಮಾಲಯ ಪರ್ವತ ತಂದು ಕೊಡುತ್ತೇವೆಂದು ಹೇಳುವಂಥ ಹುಂಬ ನಾನಲ್ಲ. ಅಲ್ಪ ಸ್ವಲ್ಪ ಸೇವೆ ಮಾಡಿದ್ದೇವೆ, ಹೆಚ್ಚು ಮಾಡುವುದಕ್ಕೆ ಶಕ್ತಿ ಇಲ್ಲ. ಇವತ್ತು ಸಾಲ ವಸೂಲು ಮಾಡದೇ ಇದ್ದರೆ ೫ ಬ್ಯಾಂಕುಗಳಲ್ಲೂ ಸಾಲ ಸಿಗುವುದಿಲ್ಲ. ೨ಳ ಪರ್ಸೆಂಟ್ ಬಡ್ಡಿ ಹಾಕುವ ಲೇವಾದೇವಿ ಮಾಡುವವರ ಹತ್ತಿರ ಇವರು ಬೇಕಾದರೆ ಹೋಗಲಿ, ೭ ಪರ್ಸೆಂಟ್ ಬಡ್ಡಿ ಮೇಲೆ ನಾವು ಸಹಾಯ ಮಾಡುತ್ತಿದ್ದೇವೆ. ಆದ್ದರಿಂದ ಶಕ್ತಿ ಇದ್ದವರು ದಯಮಾಡಿ, ವಾಪಸ್ಸು ಕೊಡಲಿ, ಮತ್ತೆ ಸಾಲ ಕೊಡುತ್ತೇವೆ. ರಿನ್ಯೂ ಮಾಡಿ, ೧೫ ದಿವಸದಲ್ಲಿ ವಾಪಸ್ಸು ಸಾಲ ತೆಗೆದುಕೊಳ್ಳಿ ಬಹುದು.

ಶ್ರೀ ಆರ್. ವೆಂಕಟರಾಮಯ್ಯ.— ಈ ಬಗ್ಗೆ ನಾನು ಹೇಳುವಂತಾದ್ದು ಇಷ್ಟೆ, ಜಪ್ತಿ ಮಾಡಲಿಕ್ಕೆ ಅಧಿಕಾರಿಗಳಿಗೆ ಯಾರು ಅಧಿಕಾರ ಕೊಟ್ಟಿದ್ದಾರೆ ? ಸಿ.ಪಿ.ಸಿ.ನಲ್ಲಿ ಕ್ಲಿಯರ್ ಆಗಿ ಹೇಳಿದ್ದಾರೆ. ಈಗ ಜಪ್ತಿ ಮಾಡತಕ್ಕದ್ದು ಬಹಳ ಅನ್ಯಾಯ. ಈ ರೀತಿ ಜಪ್ತಿ ಮಾಡತಕ್ಕದ್ದನ್ನು ತಪ್ಪಿಸಂತ್ತೀರಾ. ತಾವು ಯಾವಾಗಲೂ ಕಾನೂನು ಪ್ರಕಾರ ನಡೆದುಕೊಳ್ಳಬೇಕು.

ಶ್ರೀ ಆರ್. ಎಲ್. ಜಾಲಪ್ಪ.— ಎಲ್ಲಾ ಮಾಡುವುದು ಕಾನೂನು ಪ್ರಕಾರವೇ ಬಡವರಿಗೆ ಯಾರೂ ತೊಂದರೆ ಕೊಡಬೇಡವೆಂದಿಲ್ಲ. ಆವರ ಹತ್ತಿರ ಏನು ಸಿಕ್ಕುತ್ತದೆ ? ಈಗ ೨೦ಸಾವಿರ, ೩೦ಸಾವಿರ ಹಾಗೂ ಲಕ್ಷಗಟ್ಟಲೆ ಬಾಕಿ ಇಟ್ಟುಕೊಂಡಿರುವವರನ್ನು ಬಿಟ್ಟುಬಿಡಿ ಎಂದು ತಾವು ಹೇಳುತ್ತಿರಾ ?

iii). ಬೆಂಗಳೂರು ನಗರ ಪಾಲಿಕೆಯ ಪ್ರತಿನಿಧಿಗಳ ಮೇಲೆ ಕೆಲವು ಅಧಿಕಾರಿಗಳು ದಬ್ಬಾಳಿಕೆ ನಡೆಸಿರುವುದು

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮಹಾ ನಗರ ಪಾಲಿಕೆಯ ಕೆಲವು ಅಧಿಕಾರಿಗಳು ಚುನಾಯಿತ ಪ್ರತಿನಿಧಿಗಳ ಮೇಲೆ ದೌರ್ಜನ್ಯ, ದಬ್ಬಾಳಿಕೆ ನಡೆಸಿದ ಬಗ್ಗೆ ಕಾನೂನು, ಸಂಸದೀಯ ವ್ಯವಹಾರಗಳು. ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಮಂತ್ರಿಯವರ ಗಮನವನ್ನು ಸೆಳೆಯಂತ್ತೇನೆ.